# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನ ಪತ್ರಿಕೆ Kannada Daily

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 219 | Pages. 2 | Date: 10-07-2025, THURSDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 219 - ಪುಟಗಳು : 2 - 10 ಜುಲೈ 2025 ಗುರುವಾರ | Ph: 8762954248 | ದರ : ₹1


# ಅಕ್ರಮ ಸಂಬಂಧಕ್ಕೆ ಅಡ್ಡಿಯಾದ ಪತಿ ಕೊಲೆ

## ಆಟೋದಲ್ಲೇ ಉಸಿರುಗಟ್ಟಿಸಿ ಕೊಂದ ಪ್ರಿಯಕರ: ಮೂವರು ಅರೆಸ್ಟ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್






ಹಾಸನ: ಅಕ್ರಮ ಸಂಬಂಧಕ್ಕೆ ಅಡ್ಡಿಯಾಗುತ್ತಿದ್ದ ಗಂಡನನ್ನು ಆತನ ಹೆಂಡತಿ, ಅತ್ತೆ ಮತ್ತು ಪ್ರಿಯಕರ ಸೇರಿಕೊಂಡು ಕೊಲೆಗೈದ ಆಘಾತಕಾರಿ ಘಟನೆಯೊಂದರಲ್ಲಿ ಮೂವರನ್ನು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಾಲ್ಲೂಕಿನ ಹೂವಿನಹಳ್ಳಿ ಕಾವಲು ಗ್ರಾಮದ ಗಾರೆ ಕೆಲಸಗಾರ ಮಧು (36) ಕೊಲೆಯಾದವರು. ಆಟೋವಾಷ್ ಬಟ್ಟೆಯಿಂದ ಉಸಿರುಗಟ್ಟಿಸಿ ಕೊಲೆಗೈದು ಶವವನ್ನು ರಸ್ತೆಗೆ ಬಿಸಾಡಲಾಗಿತ್ತು. ಬಂಧಿತ ಆರೋಪಿಗಳು ಮಧು ಅವರ ಪತ್ನಿ ಭವ್ಯ, ಅತ್ತೆ ಜಯಂತಿ ಮತ್ತು ಮೋಹನ್‌ಕುಮಾರ್.

### ಘಟನೆಯ ವಿವರ

ಜುಲೈ 4ರಂದು ಗಾರೆ ಕೆಲಸಕ್ಕೆ ತೆರಳಿದ್ದ ಮಧು ಮನೆಗೆ ವಾಪಸಾಗದಿದ್ದಾಗ, ಆತನ ತಾಯಿ ರುಕ್ಮಿಣಿ ಹುಡುಕಾಟ ನಡೆಸಿದ್ದರು. ಮರುದಿನ ಹೂವಿನಹಳ್ಳಿ ಕಾವಲು ಹೊಯ್ಸಳ ರೆಸಾರ್ಟ್ ಸಮೀಪ ಶವ ಪತ್ತೆಯಾಗಿತ್ತು. ಈ ಬಗ್ಗೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

### ಕೊಲೆಗೆ ಕಾರಣ

ಮಧು ಮತ್ತು ಭವ್ಯರ ವಿವಾಹ ಏಳು ವರ್ಷಗಳ ಹಿಂದೆಯಾಗಿತ್ತು. ದಂಪತಿಗೆ ಆರು ವರ್ಷದ ಹೆಣ್ಣು ಮಗು ಮತ್ತು ನಾಲ್ಕು ತಿಂಗಳ ಮಗುವಿದೆ. ಬಾಣಂತಿಯಾದ ಭವ್ಯ ತವರು ಮನೆಯಾದ ಅರಸೀಕೆರೆ ತಾಲ್ಲೂಕಿನ ಎಸ್. ಮಾಕನಹಳ್ಳಿಯಲ್ಲಿದ್ದಳು. ಈ ವೇಳೆ ಆಕೆಯ ಪ್ರಿಯಕರ ಮೋಹನ್ ಕುಮಾರ್ ಆಗಾಗ ಭೇಟಿಯಾಗುತ್ತಿದ್ದ. ಇದನ್ನು ಗಮನಿಸಿದ ಮಧು ಗಲಾಟೆ ಮಾಡಿದ್ದ ಎನ್ನಲಾಗಿದೆ.

### ಕೊಲೆಯ ಯೋಜನೆ

ಮಗಳ ಅಕ್ರಮ ಸಂಬಂಧಕ್ಕೆ ಅಳಿಯ ಅಡ್ಡಿಯಾಗುತ್ತಿದ್ದಾನೆಂದು ಜಯಂತಿ ಕೊಲೆಗೆ ಸಂಚು ರೂಪಿಸಿದ್ದಳು. ಜುಲೈ 4ರಂದು ಮಧುವಿನ ಕೆಲಸದ ಸ್ಥಳದ ಮಾಹಿತಿಯನ್ನು ಜಯಂತಿ ನಯವಾಗಿ ಕೇಳಿ, ಮೋಹನ್ ಕುಮಾರ್‌ಗೆ ತಿಳಿಸಿದ್ದಳು. ಮಧು ಮನೆಗೆ ಬರುವಾಗ ಆಟೋದಲ್ಲಿ ಕಾದಿದ್ದ ಮೋಹನ್‌ಕುಮಾರ್, ಮದ್ಯ ಕುಡಿಸುವ ಆಮಿಷವೊಡ್ಡಿ ಆತನನ್ನು ಆಟೋಗೆ ಕರೆದೊಯ್ದಿದ್ದ. ಮಧುಗೆ ಕಂಠಪೂರ್ತಿ ಮದ್ಯ ಕುಡಿಸಿ, ಬಾಯಿಗೆ ಬಟ್ಟೆ ತುರುಕಿ ಉಸಿರುಗಟ್ಟಿಸಿ ಕೊಲೆಗೈದಿದ್ದ. ಬಳಿಕ ಭವ್ಯ ಸಲಹೆಯಂತೆ ಶವವನ್ನು ರಸ್ತೆಯಲ್ಲಿ ಬಿಸಾಡಿ ತಲೆಮರೆಸಿಕೊಂಡಿದ್ದ.

### ಪೊಲೀಸ್ ತನಿಖೆ

ಮಧು ತಾಯಿ ರುಕಿಣಿಗೆ ಸೊಸೆ ಭವ್ಯ ಮತ್ತು ಜಯಂತಿ ಮೇಲೆ ಅನುಮಾನವಿತ್ತು. ಪೊಲೀಸರು ತಾಯಿ-ಮಗಳನ್ನು ವಿಚಾರಣೆಗೊಳಪಡಿಸಿದಾಗ, ಮೋಹನ್‌ಕುಮಾರ್‌ನಿಂದ ಕೊಲೆ ಮಾಡಿಸಿರುವುದಾಗಿ ಒಪ್ಪಿಕೊಂಡರು. ಶನಿವಾರ ಮೋಹನ್‌ಕುಮಾರ್‌ನನ್ನು ಸಂತೆಯಲ್ಲಿ ಬಂಧಿಸಲಾಯಿತು. ಗ್ರಾಮಾಂತರ ಠಾಣೆ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿ, ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ.

# ಜಾಗ ಸ್ವಾಧೀನ ಮಾಡಿ ಪರಿಹಾರ ಕೊಡಲಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹೊಳೆನರಸೀಪುರ: ಪಟ್ಟಣದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಾಗಿ ಸಂಸದರು ಜಾಗ ಸ್ವಾಧೀನಪಡಿಸಿಕೊಂಡು ಮಾಲೀಕರಿಗೆ ಪರಿಹಾರ ಕೊಡಿಸಲಿ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಹೇಳಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸಂಸದರು ಬೇಕಿದ್ದರೆ ಎರಡೂ ಕಡೆ ರಸ್ತೆ ಒಡೆದು ಅಗಲೀಕರಣ ಮಾಡಲಿ. ಈ ಬಗ್ಗೆ ನನ್ನ ಅಭ್ಯಂತರವಿಲ್ಲ. ಯಾವ ಕಾಮಗಾರಿ ಕೈಗೊಂಡರೂ ಭೂಸ್ವಾಧೀನ ಮಾಡಿಕೊಂಡರೆ ಮೊದಲು ಮಾಲೀಕರಿಗೆ ಪರಿಹಾರ ಕೊಡಬೇಕು. ಪರಿಹಾರ ನೀಡದೆ ನಮ್ಮ ಅವಧಿಯಲ್ಲಿ ಯಾವ ಕಟ್ಟಡ ಒಡೆದಿಲ್ಲ. ಹಾಸನ-ಮೈಸೂರು ರಸ್ತೆ ಅಭಿವೃದ್ಧಿ ವಿಚಾರದಲ್ಲಿ ಖಾಸಗಿ ಕಟ್ಟಡ ತೆರವುಗೊಳಿಸಿಲ್ಲ. ಸಂಸದರು ರಸ್ತೆ ಅಗಲೀಕರಣ ಮಾಡುವುದಾದರೆ ಮಾಡಲಿ. ಅಲ್ಲಿನ ವರ್ತಕರು ಮತ್ತು ನಿವಾಸಿಗಳಿಗೆ ತೊಂದರೆ ಕೊಡಬಾರದು ಅಷ್ಟೆ. ಹಲವು ದಶಕಗಳಿಂದ ಮನೆ, ಮಳಿಗೆ ಕಟ್ಟಿಕೊಂಡಿದ್ದಾರೆ. ಇನ್ನಷ್ಟು ಅನುದಾನ ತಂದು ಪರಿಹಾರ ಕೊಟ್ಟು ರಸ್ತೆ ವಿಸ್ತರಿಸಿದರೆ ಅನುಕೂಲವಾಗುತ್ತದೆಂದು ಹೇಳಿದರು.

ಅಧಿಕಾರಿಗಳು ಯಾರಿಗೂ ಹೆದರದೆ ಕಾನೂನು ಪ್ರಕಾರ ಏನಿದೆಯೋ ಅದನ್ನು ಮಾಡಬೇಕು. ಅರ್ಜಿ ಬರೆಯುವವರಿಗೆ, ಹಣ ವಸೂಲಿಗೆ ಹವಣಿಸುವರಿಗೆ ಹೆದರಬಾರದು ಎಂದರು.

ಇದೆ ವೇಳೆ ಗೊರೂರು ಹೇಮಾವತಿ ಜಲಾಶಯ ಎಂಜಿನಿಯರ್‌ಗೆ ಕರೆ ಮಾಡಿದ ಹೆಚ್.ಡಿ. ರೇವಣ್ಣ ಅವರು, ಮಲೆನಾಡು ಭಾಗದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಹೇಮಾವತಿ ಜಲಾಶಯಕ್ಕೆ ಒಳಹರಿವು ಹೆಚ್ಚಿದೆ. ನದಿಗೂ ನೀರು ಹರಿಸಲಾಗುತ್ತಿದೆ. ಅದರ ಬದಲಿಗೆ ಕಾಲುವೆ ಮೂಲಕ ನೀರು ಹರಿಸಿ ಕೆರೆ ಕಟ್ಟೆಗಳನ್ನು ತುಂಬಿಸಬೇಕು. ಭತ್ತ ಬೆಳೆಗೆ ಅನುಕೂಲ ಮಾಡಿಕೊಡಬೇಕೆಂದು ಸೂಚಿಸಿದರು.

ತಹಶೀಲ್ದಾರ್ ವೈ.ಎಂ. ರೇಣುಕುಮಾರ್, ರಾಷ್ಟ್ರೀಯ ಹೆದ್ದಾರಿ ನಿಗಮದ ಎಇಇ ನಾಗವೇಣಿ, ಸಹಾಯಕ ಎಂಜಿನಿಯರ್‌ಗಳಾದ ಅನಿಶ್, ಹೇಮಾ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಲಿಂಗೇಗೌಡ ಹಾಜರಿದ್ದರು.

# ಹೃದಯಾಘಾತ: ಸರ್ಕಾರಕ್ಕೆ ಇಂದು ವರದಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯ ಜನರ ನಿದ್ದೆಗೆಡಿಸಿರುವ ಹೃದಯಾಘಾತ ಪ್ರಕರಣ ಸಂಬಂಧ ಸರ್ಕಾರಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಜು. 10ರ ಗುರುವಾರ ವರದಿ ಸಲ್ಲಿಸಲಿದ್ದಾರೆ.

ಹಠಾತ್ ಸಾವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರ ಜಯದೇವ ಸಂಸ್ಥೆಯ ನಿರ್ದೇಶಕರ ನೇತೃತ್ವದಲ್ಲಿ ನಾಲ್ವರು ತಜ್ಞರಿಂದ ವರದಿ ತಯಾರಿಕೆಗೆ ಸೂಚಿಸಿತ್ತು. ಅದರಂತೆ ಜಿಲ್ಲೆಗೆ ಭೇಟಿ ನೀಡಿದ್ದ ತಜ್ಞರು ಮಾಹಿತಿ ಸಂಗ್ರಹಿಸಿದ್ದಾರೆ. ಮತ್ತೊಂದೆಡೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರತ್ಯೇಕ ವರದಿ ತಯಾರಿಸಿದ್ದಾರೆ. ಅದರಲ್ಲಿ ಹಿಮ್ಸ್ ನಿರ್ದೇಶಕ, ಆರ್ ಸಿಹೆಚ್ ಅಧಿಕಾರಿ, ಮೆಡಿಷನ್ ವಿಭಾಗ ಅಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಸೇರಿ ಆರು ಜನರಿದ್ದಾರೆ. ಜಿಲ್ಲಾ ಆರೋಗ್ಯಾಧಿಕಾರಿಗಳ ಗಮನಕ್ಕೆ ಬಂದಂತೆ 24 ಹೃದಯಾಘಾತ ಪ್ರಕರಣಗಳ ಕುರಿತು ಮೃತರ ಮನೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗಿದೆ. ಜೀವನ ಪದ್ಧತಿ, ಕುಟುಂಬಸ್ಥರ ಆರೋಗ್ಯ ಪರಿಸ್ಥಿತಿ, ಆಹಾರ ಶೈಲಿ ಹೀಗೆ ನಾನಾ ಆಯಾಮಗಳಲ್ಲಿ ಅಧಿಕಾರಿಗಳು ಮಾಹಿತಿ ಕಲೆ ಹಾಕಿದ್ದಾರೆ. ಈ ವರದಿಯು ಗುರುವಾರ ಸರ್ಕಾರದ ಕೈ ಸೇರಲಿದೆ.

2024ರ ಜನವರಿ 1 ರಿಂದ ಡಿಸೆಂಬರ್ 30ರ ವರೆಗೆ ಹಾಸನ ಜಿಲ್ಲೆಯಲ್ಲಿ ಹೃದಯಾಘಾತದಿಂದ 121 ಜನರು ಮೃತಪಟ್ಟಿದ್ದಾರೆ.

ಹಿಮ್ಸ್, ತಾಲ್ಲೂಕು ಆಸ್ಪತ್ರೆ, ಸಮುದಾಯ ಹಾಗು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಾಹಿತಿ ಆಧರಿಸಿ ವರದಿ ಸಿದ್ಧಪಡಿಸಲಾಗಿದೆ. ಸಾಮಾನ್ಯವಾಗಿ ಹೃದಯಾಘಾತದಿಂದ ಮೃತಪಟ್ಟವರ ವಿವರ ದಾಖಲಿಸುವುದು ವಿರಳ. ಈ ಬಾರಿ ಸರ್ಕಾರ ಎಲ್ಲಾ ಮಾಹಿತಿಯನ್ನು ಕೇಳಿದ್ದರಿಂದ ಕ್ರೋಢೀಕರಿಸಲಾಗಿದೆ. ಇದು ಕೇವಲ ಸರ್ಕಾರಿ ಆಸ್ಪತ್ರೆಗಳ ದಾಖಲೆಯಾಗಿದ್ದು ಬಹುತೇಕ ಹೃದಯಾಘಾತ ಸಂಬಂಧಿ ರೋಗಿಗಳು ಖಾಸಗಿ ಆಸ್ಪತ್ರೆಗೆ ದಾಖಲಾಗುತ್ತಾರೆ. ಅಲ್ಲಿ ಮೃತಪಟ್ಟವರ ಸಂಖ್ಯೆ ಸೇರಿದರೆ ಇನ್ನೂ ಹೆಚ್ಚಾಗುತ್ತದೆ. ಸದ್ಯ ಸರ್ಕಾರಿ ಆಸ್ಪತ್ರೆಗಳ ಮಾಹಿತಿ ಮಾತ್ರ ಲಭ್ಯವಾಗಿದೆ.

# ಕೇಂದ್ರ ಸರ್ಕಾರದ ವಿರುದ್ಧ ಬೀದಿಗಿಳಿದ ಕಾರ್ಮಿಕ ಸಂಘಟನೆಗಳು




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನಾಲ್ಕು ಕಾರ್ಮಿಕ ಸಂಹಿತೆಗಳ ಜಾರಿಯನ್ನು ಖಂಡಿಸಿ, ಕಾರ್ಮಿಕ ಸಂಘಟನೆಗಳು ಹಾಗೂ ಸಂಯುಕ್ತ ಕಿಸಾನ್ ಮೋರ್ಚಾದಿಂದ ಬುಧವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಹೇಮಾವತಿ ಪ್ರತಿಮೆಯಿಂದ ಹಳೆಯ ಬಸ್ ನಿಲ್ದಾಣದ ವರೆಗೆ ಸಾವಿರಾರು ಕಾರ್ಮಿಕರು ಮೆರವಣಿಗೆ ಮೂಲಕ ಬಿಎಂ ರಸ್ತೆಗೆ ಆಗಮಿಸಿದರು. ನಂತರ ಮಾನವ ಸರಪಳಿ ರಚಿಸಿ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಕಾರ್ಮಿಕ ಸಂಘಟನೆಗಳ ಕನಿಷ್ಠ ವೇತನದ ಬೇಡಿಕೆಯನ್ನು ತಿರಸ್ಕರಿಸಿ, ಅಸಂಘಟಿತ ಕಾರ್ಮಿಕರಿಗೆ ಕಾನೂನು ರಕ್ಷಣೆಯನ್ನೂ ನಿರಾಕರಿಸಲಾಗಿದೆ. ದಿನಕ್ಕೆ ಕನಿಷ್ಠ 600 ರೂ. ವೇತನಕ್ಕೆ ಬದಲು ಕೇವಲ 187 ರೂ. ಕೂಲಿ ನಿಗದಿಪಡಿಸಲಾಗಿದೆ. 18,000 ರೂ. ಗಿಂತ ಹೆಚ್ಚು ವೇತನ ಪಡೆಯುವವರನ್ನು ಕಾರ್ಮಿಕರೆಂದು ಪರಿಗಣಿಸದೇ, 50ಕ್ಕಿಂತ ಕಡಿಮೆ ಗುತ್ತಿಗೆ ಕಾರ್ಮಿಕರಿರುವ ಸಂಸ್ಥೆಗಳಿಗೆ ಲೈಸೆನ್ಸ್ ವಿನಾಯಿತಿ ನೀಡಲಾಗಿದೆ. 100 ರಿಂದ 300 ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಲೇಆಫ್, ರಿಟ್ರಿಂಚ್‌ಮೆಂಟ್ ಹಾಗೂ ಮುಚ್ಚುವಿಕೆಗೆ ಸರ್ಕಾರದ ಪೂರ್ವಾನುಮತಿಯ ಅಗತ್ಯವನ್ನೂ ತೆಗೆದು ಹಾಕಲಾಗಿದೆ ಎಂದರು.

ರಾಜ್ಯವ್ಯಾಪಿ ಕನಿಷ್ಠ 36,000 ರೂ. ವೇತನ, ಗುತ್ತಿಗೆ, ತಾತ್ಕಾಲಿಕ ಉದ್ಯೋಗ ಹಾಗೂ ಟ್ರೈನಿಗಳ ನೇಮಕಾತಿ ನಿಷೇಧ, ಸಮಾನ ಕೆಲಸಕ್ಕೆ ಸಮಾನ ವೇತನ, ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ 9,000 ರೂ. ಪಿಂಚಣಿ ಹಾಗೂ ಸಾಮಾಜಿಕ ಭದ್ರತೆ ಖಾತರಿ, ಎನ್ ಪಿಎಸ್ ರದ್ದುಪಡಿಸಿ ಹಳೆಯ ಪಿಂಚಣಿ ವ್ಯವಸ್ಥೆಯ ಮರುಸ್ಥಾಪನೆ, ಬೆಲೆ ಏರಿಕೆಯ ನಿಯಂತ್ರಣ, ಜಿಎಸ್‌ಟಿ ರದ್ದು, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸಾರ್ವತ್ರಿಕರಣ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ತಕ್ಷಣದ ರದ್ದುಪಡಿಕೆ, ಉದ್ಯೋಗದ ಹಕ್ಕಿಗೆ ಮೂಲಭೂತ ಹಕ್ಕಿನ ಮಾನ್ಯತೆ, ಗ್ರಾಮೀಣ ಉದ್ಯೋಗ ಖಾತರಿಯಲ್ಲಿ ವರ್ಷಕ್ಕೆ ಕನಿಷ್ಠ 200 ದಿನ ಉದ್ಯೋಗ ಮತ್ತು ದಿನಕ್ಕೆ 600 ರೂ. ಕೂಲಿ, ಉಚಿತ ಶಿಕ್ಷಣ, ಆರೋಗ್ಯ, ನೀರು, ನೈರ್ಮಲ್ಯ ಹಾಗೂ ವಸತಿಯ ಖಾತರಿಗಳನ್ನು ಸರ್ಕಾರ ನೀಡಬೇಕು ಎಂದು ಆಗ್ರಹಿಸಿದರು. ಕಾರ್ಮಿಕ ಮುಖಂಡರಾದ ಹರೀಶ್, ಸೌಮ್ಯ, ಧರಣಿ, ಸುಮಿತ್ರ, ಅರುಣಾಗಿರಿ, ಬಸವರಾಜ್, ರಮೇಶ್, ನೇತ್ರಾವತಿ ಮತ್ತು ನಜಿಯಾ ಇತರರಿದ್ದರು.

# ಗ್ರಾಮೀಣ ಬ್ಯಾಂಕ್ ಖಾಸಗೀಕರಣ ಬೇಡ




ಹಾಸನ: ಗ್ರಾಮೀಣ ಬ್ಯಾಂಕ್‌ಗಳ ಖಾಸಗೀಕರಣ ನಿರ್ಧಾರದಿಂದ ಕೇಂದ್ರ ಸರ್ಕಾರ ಹಿಂದೆ ಸರಿಯಬೇಕೆಂದು ಆಗ್ರಹಿಸಿ ನಗರದ ಕೆ.ಆರ್. ಪುರಂನಲ್ಲಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್ ನೌಕರರು ಬುಧವಾರ ಕೆಲಸ ಬಹಿಷ್ಕರಿಸಿ ಪ್ರತಿಭಟಿಸಿದರು.

ಗ್ರಾಮೀಣ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಪ್ರಭು ಮಾತನಾಡಿ, ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ಬ್ಯಾಂಕ್‌ಗಳು ರೈತರಿಗೆ ಉತ್ತಮ ಸೇವೆ ಒದಗಿಸುತ್ತಿವೆ. ಆದರೆ ಕೇಂದ್ರ ಸರ್ಕಾರ ಖಾಸಗೀಕರಣ ನೀತಿ ಅಳವಡಿಸಲು ಮುಂದಾಗಿರುವುದು ಖಂಡನೀಯ ಎಂದರು.

ರಾಷ್ಟ್ರೀಯ ಗ್ರಾಮೀಣ ಬ್ಯಾಂಕ್ ಸ್ಥಾಪಿಸಿ ಅದರ ಮಾರ್ಗದರ್ಶನದಲ್ಲಿ ಎಲ್ಲಾ ರಾಜ್ಯಗಳ ಬ್ಯಾಂಕ್‌ಗಳು ಕಾರ್ಯನಿರ್ವಹಿಸುವಂತೆ ಕಾನೂನು ಜಾರಿಗೊಳಿಸಬೇಕು. ಸದ್ಯ ಖಾಲಿ ಇರುವ 50000 ಕ್ಕೂ ಹೆಚ್ಚು ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿರುವಂತೆ ಸಮನಾಗಿ ಬಡ್ತಿ ನೀತಿ ಜಾರಿಗೊಳಿಸಬೇಕು.ಅಗತ್ಯತೆಗೆ ತಕ್ಕಂತೆ ಮಾನವಶಕ್ತಿ ನೀತಿ ಮತ್ತು ವರ್ಗಾವಣೆ ನೀತಿ ರೂಪಿಸಬೇಕು. ಅರೆಕಾಲಿಕ, ಹೊರಗುತ್ತಿಗೆ, ದೈನಂದಿನ ಕೂಲಿ ನೌಕರರನ್ನು ಖಾಯಂ ಮಾಡಬೇಕು. ಹೊಸ ಪಿಂಚಣಿ ಯೋಜನೆ ರದ್ದುಪಡಿಸಿ ಹಳೆಯ ಪಿಂಚಣಿ ಅನುಷ್ಠಾನಗೊಳಿಸಬೇಕೆಂದು ಆಗ್ರಹಿಸಿದರು.

ಸಂಘದ ಚಂದ್ರಶೇಖರ್, ರವಿಶಂಕರ್, ತೇಜಸ್ವಿ, ಯೋಗೀಶ್, ಪ್ರದೀಪ್ ಮತ್ತಿತರರಿದ್ದರು.

# ಶ್ರಾವಕರು ನಿತ್ಯ ಪೂಜಿಸಿದರೆ ಚಾತುರ್ಮಾಸ ಸಾರ್ಥಕ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಶ್ರೀ ಕ್ಷೇತ್ರದಲ್ಲಿ ಮಾತ್ರ ಚಾತುರ್ಮಾಸ ಆಚರಣೆಯಾದರೆ ಸಾಲದು, ಶ್ರಾವಕರ ಮನಸ್ಸಿನಲ್ಲಿಯೂ ಕಲಶ ಸ್ಥಾಪನೆ ಮಾಡಿಕೊಂಡು ಪೂಜಿಸುವ ಸಂಕಲ್ಪ ಮಾಡಿದರೆ ಚಾತುರ್ಮಾಸ ಪೂಜೆ ಸಾರ್ಥಕವಾಗಲಿದೆ ಎಂದು ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಜೈನಕಾಶಿ ಶ್ರವಣಬೆಳಗೊಳದ ಚಾವುಂಡರಾಯ ಮಂಟಪದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಚಾತುರ್ಮಾಸ ಮಂಗಲ ಕಲಶ ಸ್ಥಾಪನಾ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಎಲ್ಲರೂ ಧ್ಯಾನದಲ್ಲಿ ತಲ್ಲೀನರಾಗಬೇಕು ಎಂದರು.

ನಮ್ಮಲ್ಲಿರುವ ಶಾಸ್ತ್ರದ ಪ್ರಕಾರ ನೂತನ ದೇಗುಲಗಳನ್ನು ನಿರ್ಮಿಸುವುದಕ್ಕಿಂತ ಶಿಥಿಲಾವಸ್ಥೆ ತಲುಪಿರುವ ಪುರಾತನ ದೇಗುಲಗಳನ್ನು ಜೀರ್ಣೋದ್ಧಾರಗೊಳಿಸಿದರೆ ಪುಣ್ಯ ಸಿಗಲಿದೆ. ದೇಗುಲಗಳು ಉತ್ತುಂಗದಲ್ಲಿದ್ದರೆ ವಿಶ್ವವೇ ಪ್ರಜ್ವಲಿಸಲಿದೆ ಎಂದರು.

ಚಾವುಂಡರಾಯ ಸಭಾ ಮಂಟಪವನ್ನು ಕಲ್ಲಿನಲ್ಲಿ ನಿರ್ಮಿಸಬೇಕೆಂಬ ಸಂಕಲ್ಪವಿದೆ. 2 ಕೋಟಿ ರೂ. ವೆಚ್ಚದ ಯೋಜನೆ ರೂಪಿಸಿದ್ದು ಶೀಘ್ರದಲ್ಲಿಯೇ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗುವುದು. ಹಿಂದಿನ ಪೂಜ್ಯರ ಆಶಯದಂತೆ ಎಲ್ಲಾ ಕಾರ್ಯಗಳು ನಿರ್ವಿಘ್ನವಾಗಿ ನಡೆಯುತ್ತಿವೆಯೆಂದರು.

ಕಾನೂನು ಮತ್ತು ಸಂಸದೀಯ ಸಚಿವ ಹೆಚ್.ಕೆ. ಪಾಟೀಲ್ ಮಾತನಾಡಿ, ವಿಶ್ವ ವಿಖ್ಯಾತ ಶ್ರವಣಬೆಳಗೊಳ ಕ್ಷೇತ್ರವನ್ನು ವಿಶ್ವ ಪರಂಪರೆ ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರ ಸಿದ್ಧತೆ ಮಾಡಿಕೊಂಡಿದೆ. ಜೈನ ಮಂಟಪದಲ್ಲಿರುವ ಸಾವಿರ ವರ್ಷಗಳ ಐತಿಹಾಸಿಕ ವರ್ಣ ಕಲೆಯನ್ನು ನಿರ್ಲಕ್ಷಿಸಲಾಗಿದೆ. ಎಲ್ಲವೂ ಮಾಸುವ ಹಂತದಲ್ಲಿದೆ. ವರ್ಣ ಚಿತ್ರದ ಸಂರಕ್ಷಣೆಗೆ ರಾಜ್ಯ ಸರ್ಕಾರ ಸಿದ್ಧವಿದ್ದು ಸೂಕ್ತ ಬಣ್ಣ ಲೇಪನ ಮಾಡಿಸಲಾಗುವುದೆಂದು ತಿಳಿಸಿದರು. ಹಿಂದಿನ ಹಾಗೂ ಈಗಿನ ಸ್ವಾಮೀಜಿಯವರ ಮತ್ತು ನಮ್ಮ ನಡುವೆ ಅವಿನಾಭಾವ ಸಂಬಂಧವಿದೆ. 2030ರ ಮಹಾಮಸ್ತಕಾಭಿಷೇಕ ವೇಳೆ ರಾಜ್ಯದಲ್ಲಿ ಯಾವ ಸರ್ಕಾರ ಆಡಳಿತದಲ್ಲಿದ್ದರೂ ನಾವು ಕೈ ಜೋಡಿಸಿ ಯಶಸ್ವಿಗೊಳಿಸಲು ಮುತುವರ್ಜಿ ವಹಿಸಲಾಗುವುದೆಂದು ಭರವಸೆ ನೀಡಿದರು.

### ಪ್ರಸಾದ್ ಯೋಜನೆಗೆ ಸೇರಿಸಿ

ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಮೈಸೂರು ಚಾಮುಂಡೇಶ್ವರಿ ದೇಗುಲ ಹಾಗೂ ಸವದತ್ತಿ ಯಲ್ಲಮ್ಮ ಗುಡ್ಡದ ಮಾದರಿಯಲ್ಲಿ ಜೈನಕಾಶಿ ಶ್ರವಣಬೆಳಗೊಳ ಕ್ಷೇತ್ರಕ್ಕೂ ಪ್ರಸಾದ್ ಯೋಜನೆ ಕಲ್ಪಿಸಬೇಕೆಂದು ಮನವಿ ಮಾಡಿದರು.

ಜೈನ ಕಾಶಿಯಲ್ಲಿ 2030ಕ್ಕೆ ನಡೆಯಲಿರುವ ಮಹಾಮಸ್ತಕಾಭಿಷೇಕ ಹಿನ್ನಲೆ ಕ್ಷೇತ್ರವನ್ನು ಅಗತ್ಯ ಮೂಲಸೌಕರ್ಯಗಳೊಂದಿಗೆ ಸರ್ವತೋಮುಖ ಅಭಿವೃದ್ಧಿಪಡಿಸಲು ಹೆಚ್ಚಿನ ಅನುದಾನ ಅಗತ್ಯವಿದ್ದು ಕೇಂದ್ರ ಹಾಗು ರಾಜ್ಯ ಸರ್ಕಾರವು ಹೆಚ್ಚಿನ ಸಹಕಾರ ನೀಡಬೇಕು ಎಂದರು.

ಪರಮ ಪೂಜ್ಯ ಶ್ರೀ 108 ಸುವಿಧಿಸಾಗರ ಮಹಾರಾಜರು, 108 ವರ್ಧಮಾನ ಸಾಗರ ಮಹಾರಾಜರು, ಮುನಿವರ್ಯರು, ಮಾತಾಜಿಯವರು, ಶ್ರಾವಕ-ಶ್ರಾವಣಿಯರು, ಯೋಜನೆ ಮತ್ತು ಸಾಂಖ್ಯಿಕ ಮಂತ್ರಿ ಡಿ.ಸುಧಾಕರ್ ಹಾಗೂ ಇತರರು ಇದ್ದರು.

# ಹೆದ್ದಾರಿ ಕಾಮಗಾರಿ ಲೋಪವಾಗದಂತೆ ಕ್ರಮ

## ಸ್ಥಳ ಪರಿಶೀಲಿಸಿದ ಸಂಸದ ಶ್ರೇಯಸ್ | ಸಾರ್ವಜನಿಕರ ಮನವಿ ಸ್ವೀಕಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹೊಳೆನರಸೀಪುರ: ಪಟ್ಟಣದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಹೆದ್ದಾರಿ 373ರ ಕಾಮಗಾರಿಯಲ್ಲಿ ಲೋಪವಾಗದಂತೆ ಎಚ್ಚರ ವಹಿಸಲಾಗುವುದು. ಸ್ಥಳೀಯರು ಆತಂಕ ಪಡಬಾರದು ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಅವೈಜ್ಞಾನಿಕ ಕಾಮಗಾರಿಯಿಂದ ಅಕ್ಕ ಪಕ್ಕದ ಜಾಗದ ಮಾಲೀಕರಿಗೆ ತೊಂದರೆಯಾಗುತ್ತಿದೆ ಎಂಬ ದೂರು ಕೇಳಿಬಂದ ಹಿನ್ನೆಲೆಯಲ್ಲಿ ಮಂಗಳವಾರ ಪುರಸಭೆ ಮುಖ್ಯಾಧಿಕಾರಿ, ಸೆಸ್ಕಾಂ ಎಂಜಿನಿಯರ್ ಹಾಗು ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳೊಂದಿಗೆ ಪರಿಶೀಲಿಸಿದರು.

ಬೈಪಾಸ್ ರಸ್ತೆ ಮತ್ತು ಹಾಸನ ಮಾರ್ಗದ ಸಮಾನಾಂತರ ರಸ್ತೆಯನ್ನು 24 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಕೆಲವೆಡೆ ಅವೈಜ್ಞಾನಿಕ ಕಾಮಗಾರಿ ನಡೆದಿದೆ. ಯುಜಿಡಿ ಸಂಪರ್ಕ ಜಾಲ, ಕುಡಿಯುವ ನೀರಿನ ಪೈಪ್‌ಲೈನ್ ಸರಿಪಡಿಸಿಕೊಳ್ಳಬೇಕು. ರಸ್ತೆಯಾದ ನಂತರ ಮತ್ತೆ ಕೆಲಸದ ಹೆಸರಿನಲ್ಲಿ ರಸ್ತೆ ಅಗೆಯುವುದನ್ನು ತಪ್ಪಿಸಬೇಕು. ಒಂದೆರಡು ಕಡೆ ವಿದ್ಯುತ್ ಕಂಬಗಳು ರಸ್ತೆಗೆ ಅಂಟಿಕೊಂಡಿವೆ.

ಅವುಗಳನ್ನು ಬದಿಗೆ ಸ್ಥಳಾಂತರಗೊಳಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

### ದೂರುಗಳ ಸುರಿಮಳೆ

ಕನಕ ಭವನದ ಮುಂದೆ ರಸ್ತೆಗೆ ಅಡ್ಡಲಾಗಿ ಈ ಹಿಂದೆ ಇದ್ದ ಚರಂಡಿ ಮತ್ತು ಡೆಕ್ ಕಾಮಗಾರಿ ವೀಕ್ಷಿಸಿದ ಅವರು, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ಮಳೆ ನೀರು ಹೊರ ಹೋಗುವ ಉದ್ದೇಶದಿಂದ ಮಾಡಿರುವ ಚರಂಡಿ ಅವೈಜ್ಞಾನಿಕವಾಗಿದೆ. ಭಾರೀ ಗಾತ್ರದ ವಾಹನ ಓಡಾಡುವ ರಸ್ತೆಗೆ ಅಡ್ಡಲಾಗಿ ಚರಂಡಿ ಮತ್ತು ಡೆಕ್‌ಗೆ ಕಬ್ಬಿಣದ ಸರಳನ್ನು ಸಮರ್ಥವಾಗಿ ಬಳಸಿಲ್ಲ ಎಂದು ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಸಂಸದರು, ಗುತ್ತಿಗೆದಾರರು ಅಷ್ಟು ಸುಲಭವಾಗಿ ನುಣಿಚಿಕೊಳ್ಳಲಾಗದು. ಬಿಲ್ ಪಡೆದರೂ ಹತ್ತು ವರ್ಷ ನಿರ್ವಹಣೆ ಹೊಣೆಗಾರಿಕೆ ಇದ್ದೇ ಇರುತ್ತದೆ. ಹಲವೆಡೆ ರಸ್ತೆ ಜಾಗ ಅತಿಕ್ರಮಣವಾಗಿರುವ ಕುರಿತು ಮಾಹಿತಿ ಇದೆ. ಮತ್ತೊಮ್ಮೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಪುರಸಭೆ ಕಾಂಗ್ರೆಸ್ ಸದಸ್ಯ ಭೈರಶೆಟ್ಟಿ, ಮಾಜಿ ಅಧ್ಯಕ್ಷ ಹೆಚ್.ವಿ. ಪುಟ್ಟರಾಜ್, ನಾಮನಿರ್ದೇಶಿತ ಸದಸ್ಯರು, ರಾಷ್ಟ್ರೀಯ ಹೆದ್ದಾರಿ ನಿಗಮದ ಎಇಇ ನಾಗವೇಣಿ, ಪುರಸಭಾ ಮುಖ್ಯಾಧಿಕಾರಿ ಶಿವಶಂಕರ್, ಕಾಂಗ್ರೆಸ್ ಮುಖಂಡರು ಹಾಜರಿದ್ದರು.

### ಹಂಗರಹಳ್ಳಿ ಮೇಲ್ಸೇತುವೆಗೆ ಮರು ಟೆಂಡರ್

ಪಟ್ಟಣದಲ್ಲಿ ರಸ್ತೆ ಅಗಲೀಕರಣ ಉದ್ದೇಶ ಇತ್ತು. ಪ್ರಸ್ತುತ ನಡೆದಿರುವ ಕಾಮಗಾರಿಗೆ 24 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಟೆಂಡರ್ ನಡೆದಿದೆ. ನಿಯಮಾವಳಿ ಪ್ರಕಾರ ಶೇ. 15 ರಷ್ಟು ಕಡಿಮೆ ಮೊತ್ತಕ್ಕೆ ಟೆಂಡರ್ ನಿಗದಿಯಾಗಿದೆ. ಇನ್ನು ರಸ್ತೆ ಇಕ್ಕೆಲಗಳ ಖಾಸಗಿದಾರರ ಕಟ್ಟಡ ಒಡೆದು ರಸ್ತೆ ಅಗಲೀಕರಣ ನಡೆಸಲು ಪ್ರಕ್ರಿಯೆ ನಡೆಸಿ ಪರಿಹಾರ ನೀಡಬೇಕಿದೆ. ಯೋಜಿತ ಕಾಮಗಾರಿ ಪಟ್ಟಿಯಲ್ಲಿ ಇಂತಹ ಪ್ರಸ್ತಾವನೆಗಳಿಲ್ಲ. ಹಾಗಾಗಿ ರಸ್ತೆ ಅಭಿವೃದ್ಧಿಪಡಿಸುವುದಷ್ಟೇ ಆದ್ಯತೆಯಾಗಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಹಂಗರಹಳ್ಳಿ ಸಮೀಪ ಹಾಸನ, ಮೈಸೂರು ರಸ್ತೆಯ ರೈಲ್ವೆ ಮೇಲ್ಸೇತುವೆ ಕಾಮಗಾರಿ ಸ್ಥಗಿತವಾಗಿರುವ ಕುರಿತು ಪ್ರತಿಕ್ರಿಯಿಸಿ, ಹಿಂದಿನ ಟೆಂಡರ್ ರದ್ದುಪಡಿಸಲಾಗಿದೆ. ಮರು ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದರಿಂದ ಕಾಮಗಾರಿ ವಿಳಂಬವಾಗಿದೆ ಎಂದರು.

# ಜೋಕೆ..ಸ್ವಲ್ಪ ಎಚ್ಚರ ತಪ್ಪಿದರೂ ಅನಾಹುತ

## ಯುಜಿಡಿ ಕಾಮಗಾರಿಗಾಗಿ ರಸ್ತೆ ಅಗೆತ : ಸಾರ್ವಜನಿಕರಿಂದಲೂ ಹಣಕ್ಕೆ ಬೇಡಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ 14ನೇ ವಾರ್ಡ್‌ನಲ್ಲಿ ಮಹಾನಗರ ಪಾಲಿಕೆಯಿಂದ ಯುಜಿಡಿ ದುರಸ್ತಿಗಾಗಿ ರಸ್ತೆ ಅಗೆದಿರುವುದರಿಂದ ವಾಹನಗಳ ಓಡಾಟಕ್ಕೆ ಭಾರೀ ತೊಂದರೆಯಾಗುತ್ತಿದ್ದು ಸಾರ್ವಜನಿಕರ ಪಾಡು ಹೇಳತೀರದಾಗಿದೆ. ಸ್ವಲ್ಪ ಎಚ್ಚರ ತಪ್ಪಿದರೂ ಅನಾಹುತ ಕಟ್ಟಿಟ್ಟ ಬುತ್ತಿಯಾಗಿದೆ.



ನಗರದಲ್ಲಿ ಕಳೆದ ಒಂದು ತಿಂಗಳಿಂದ ಮಳೆ ಸುರಿಯುತ್ತಲೇ ಇದ್ದು ಈ ಸಮಯದಲ್ಲಿ ರಸ್ತೆ ಅಗೆದು ಸಂಚಾರಕ್ಕೆ ಅಡಚಣೆಯುಂಟು ಮಾಡುವ ಅವಶ್ಯಕತೆ ಏನಿತ್ತು ಎಂದು ಸ್ಥಳೀಯರು ಪ್ರಶ್ನಿಸುತ್ತಿದ್ದಾರೆ. ಹೇಮಾವತಿ ಆಸ್ಪತ್ರೆ ರಸ್ತೆ ಮುಂಭಾಗ ಹಾಗೂ ಹೊಸಲೈನ್ ರಸ್ತೆಗೆ ಸಂಪರ್ಕಿಸುವ ರಸ್ತೆಯ ಮಧ್ಯಭಾಗದಲ್ಲಿ ಜೆಸಿಬಿಯಿಂದ ಅಗೆದಿರುವುದರಿಂದ ವಾಹನಗಳ ಓಡಾಟಕ್ಕೆ ತೊಂದರೆಯಾಗಿದೆ. ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ ಕಟ್ಟಿಟ್ಟ ಬುತ್ತಿ. ರಸ್ತೆ ಬಂದ್ ಆಗಿರುವುದರಿಂದ ಬೈಕ್ ಹಾಗೂ ಕಾರು ಚಾಲಕರು ತೊಂದರೆ ಅನುಭವಿಸುತ್ತಿದ್ದಾರೆ. ಯಾವ ಮುನ್ಸೂಚನೆ ಇಲ್ಲದೆ ಸಂಪರ್ಕ ಬಂದ್ ಮಾಡುತ್ತಾರೆ. ಜೊತೆಗೆ ಸಂಚಾರ ಬಂದ್ ಮಾಡುವ ಕುರಿತು ಮೊದಲೇ ಮಾಹಿತಿ ನೀಡುವುದಿಲ್ಲ. ಕನಿಷ್ಟ ರಸ್ತೆ ಬಂದ್ ಆಗಿರುವ ಕುರಿತು ಬ್ಯಾರಿಕೇಡ್ ಅಥವಾ ಕಲ್ಲುಗಳನ್ನು ಸಹ ಇಟ್ಟಿಲ್ಲ. ರಾತ್ರಿ ಹೊತ್ತು ಗೊತ್ತಿಲ್ಲದೆ ವಾಹನ ಸವಾರರು ಗುಂಡಿಗೆ ಬಿದ್ದ ನಿದರ್ಶನಗಳು ಸಾಕಷ್ಟಿವೆ. ನಿರಂತರ ಮಳೆಯಿಂದ ರಸ್ತೆಗಳೆಲ್ಲ ಜಲಾವೃತವಾಗಿರುತ್ತದೆ. ಜೊತೆಗೆ ಕೆಂಪು ಮಣ್ಣು ಲೋಡ್‌ಗಟ್ಟಲೇ ರಸ್ತೆಯನ್ನು ಆವರಿಸಿರುವುದರಿಂದ ಮನೆಯಿಂದ ಹೊರಬರಲು ಹಿಂದೇಟು ಹಾಕುವಂತಾಗಿದೆ. ಕಳೆದ ನಾಲ್ಕು ದಿನಗಳ ಹಿಂದೆ ಬೈಕ್ ಸವಾರನೊಬ್ಬ ಕೆಸರುಮಿಶ್ರಿತ ರಸ್ತೆಯಲ್ಲಿ ಬಿದ್ದು ಗಾಯಮಾಡಿಕೊಂಡಿರುವ ಘಟನೆ ನಡೆದಿದೆ.

> 14ನೇ ವಾರ್ಡ್‌ನಲ್ಲಿ ಯುಜಿಡಿ ಸಮಸ್ಯೆ ಬಗೆಹರಿಸುವಂತೆ ಸ್ಥಳೀಯರೇ ಒತ್ತಾಯಿಸಿದ್ದರಿಂದ ಕಾಮಗಾರಿ ಕೈಗೊಳ್ಳಬೇಕಾಯಿತು. ಮಳೆಗಾಲವಾದ್ದರಿಂದ ಕೆಲಸ ಮುಗಿಯುವುದು ವಿಳಂಬವಾಗುತ್ತಿದೆ. ಮನೆ ಮಾಲೀಕರು ಸ್ವ ಇಚ್ಛೆಯಿಂದ ಹಣ ಕೊಟ್ಟರೆ ಕಾರ್ಮಿಕರು ಪಡೆಯುತ್ತಾರೆ ಹೊರತು ಬಲವಂತವಿಲ್ಲ. ಹೆಚ್ಚುವರಿ ಪೈಪ್ ಹಾಗೂ ಇತರ ಸಲಕರಣೆ ಬೇಕಾಗುವುದರಿಂದ ಜನರೇ ಹಣ ಕೊಡುತ್ತಿದ್ದಾರೆ. ಬೇಗ ಕೆಲಸ ಮುಗಿಸಲು ಸೂಚಿಸಲಾಗುವುದು.
>
> - ಎಂ. ಚಂದ್ರೇಗೌಡ, ಪಾಲಿಕೆ ಮೇಯರ್

### ಬಿಎಂ ರಸ್ತೆಯಲ್ಲಿ ಅಸುರಕ್ಷಿತ ಕೆಲಸ

ಹಾಸನ ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿರುವ ನಂತರ ಹಲವು ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಬಿಎಂ ರಸ್ತೆಯ ಡಿವೈಡರ್ ಮಧ್ಯದಲ್ಲಿ ಬೆಳೆದಿದ್ದ ಕಳೆ ತೆಗೆಯಲು ಕಳೆ ಕೊಚ್ಚುವ ಯಂತ್ರದಿಂದ ಕೆಲಸ ಮಾಡಿಸಲಾಗುತ್ತಿದೆ. ಆದರೆ ಕಾರ್ಮಿಕರು ಯಾವ ಮುಂಜಾಗ್ರತಾ ಕ್ರಮ ಕೈಗೊಳ್ಳದೆ ಯಂತ್ರದಿಂದ ಕಾರ್ಯಾಚರಣೆ ಮಾಡುತ್ತಿರುವಾಗ ಕಲ್ಲು ಕಾರು, ಬೈಕ್‌ಗೆ ಸಿಡಿದ ಘಟನೆಗಳು ನಡೆದಿವೆ. ಜನಸಂಚಾರ ಪ್ರದೇಶಗಳಲ್ಲಿ ಕೆಲಸ ಮಾಡುವಾಗ ಸುರಕ್ಷತಾ ಬೇಲಿ, ಬ್ಯಾರಿಕೇಡ್ ಅಳವಡಿಸಬೇಕು. ಆದರೆ ಸಂತಪೇಟೆಯಲ್ಲಿ ಯಾವ ಸುರಕ್ಷತೆ ಅನುಸರಿಸದೆ ಯಂತ್ರದಿಂದ ಕೆಲಸ ಮಾಡುತ್ತಿದ್ದಾಗ ಕಲ್ಲಿನ ಚೂರು ಚಲಿಸುತ್ತಿದ್ದ ಕಾರಿಗೆ ಸಿಡಿದು ಚಾಲಕನ ಭಾಗದ ಗಾಜು ಒಡೆದಿದೆ. ವಾಹನ ಚಾಲಕ ಗಾಜು ಏರಿಸಿದ್ದರಿಂದ ಭಾರೀ ಅನಾಹುತ ತಪ್ಪಿದೆ.



### ಮನೆ ಮಾಲೀಕರಿಂದ ಹಣಕ್ಕೆ ಬೇಡಿಕೆ

ಮಹಾನಗರ ಪಾಲಿಕೆಗೆ ವರ್ಷಕ್ಕೆ ತೆರಿಗೆ ಕಟ್ಟುತ್ತೇವೆ. ಅದಕ್ಕೆ ತಕ್ಕಂತೆ ಕುಡಿಯುವ ನೀರು, ಚರಂಡಿ, ಸುಗಮ ರಸ್ತೆ ವ್ಯವಸ್ಥೆ ಕಲ್ಪಿಸುವುದು ಅವರ ಜವಾಬ್ದಾರಿ. ಈಗ ಯುಜಿಡಿ ಪೈಪ್ ಹಾಗೂ ಇತರ ಸಾಮಗ್ರಿ ನಾವೇ ಖರೀದಿಸಿಕೊಡಬೇಕು. ಜೊತೆಗೆ ಪ್ರತಿ ಮನೆಗೆ 2 ಸಾವಿರ ರೂ. ಹಣ ಕೇಳುತ್ತಿದ್ದಾರೆ.

ನಮ್ಮ ಹಣದಲ್ಲಿ ಯುಜಿಡಿ ದುರಸ್ತಿ ಮಾಡುವುದಾದರೆ ಮಹಾನಗರ ಪಾಲಿಕೆ ಜವಾಬ್ದಾರಿ ಏನೆಂದು ನಿವಾಸಿಗಳು ಪ್ರಶ್ನಿಸುತ್ತಿದ್ದಾರೆ. ಮಳೆಗಾಲದಲ್ಲಿ ರಸ್ತೆ ಅಗೆದಿರುವುದು ಮೊದಲ ತಪ್ಪು. ಬೇಗ ಕೆಲಸ ಮುಗಿಯುತ್ತದೆಂಬ ಭರವಸೆಯಿಂದ ಕೆಲಸಗಾರರಿಗೆ ಹಣ ಸಹ ಕೊಟ್ಟಿದ್ದೇವೆ. ಆದರೆ 15 ದಿನಗಳಿಂದ ರಸ್ತೆಯನ್ನು ಅದ್ವಾನ ಮಾಡಿಟ್ಟಿದ್ದಾರೆ. ಗುಂಡಿ ಮುಚ್ಚುವ ಹಾಗೂ ಮರು ಡಾಂಬರೀಕರಣ ಕೆಲಸ ಯಾವಾಗ ಮಾಡುತ್ತಾರೆಂಬುದು ಅರ್ಥವಾಗುತ್ತಿಲ್ಲವೆಂದು ಸ್ಥಳೀಯರಾದ ಚಂದ್ರಶೇಖರ್ ಅಸಮಾಧಾನ ವ್ಯಕ್ತಪಡಿಸಿದರು.

# ಗುರಿ ಮುಟ್ಟಲು ಸತತ ಪ್ರಯತ್ನ ಮುಖ್ಯ



ಹಾಸನ: ಆಸಕ್ತಿ, ತಾಳ್ಮೆ ಮತ್ತು ದೃಢ ನಿರ್ಧಾರ ಹಾಗೂ ಪ್ರಯತ್ನದಿಂದ ಜೀವನದಲ್ಲಿ ಅಂದುಕೊಂಡದ್ದನ್ನು ಸಾಧಿಸಬಹುದು ಎಂದು ಜಿಲ್ಲಾ ಸಂಸ್ಕೃತ ಸಂಘದ ಕಾರ್ಯದರ್ಶಿ ಪರಮೇಶ್ವರ ವಿ. ಭಟ್ ಹೇಳಿದರು.

ನಗರದ ಹಾರನಹಳ್ಳಿ ರಾಮಸ್ವಾಮಿ ಪದವಿಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಪರಿಚಯ (ಓರಿಯೆಂಟೇಶನ್) ಕಾರ್ಯಕ್ರಮದಲ್ಲಿ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿಯೇ ಬದುಕಿನ ಗುರಿ ನಿರ್ಧರಿಸಿ ಸಾಧನೆಗೆ ಅಗತ್ಯ ಕೌಶಲ ರೂಢಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಕಲಿಯುವ ಶ್ರದ್ಧೆ, ಸತತ ಪ್ರಯತ್ನ, ಆತ್ಮವಿಶ್ವಾಸ ಮತ್ತು ಸಾಮಾಜಿಕ ಕಳಕಳಿಯಿಂದ ಜೀವನದಲ್ಲಿ ಯಶಸ್ಸು ಕಾಣಬಹುದು. ವಿದ್ಯೆಯಿಂದ ವಿಮುಖ ಮಾಡುವ ಹವ್ಯಾಸಗಳಿಗೆ ಬಲಿಯಾಗದೆ ಪೋಷಕರ ಕನಸು-ನನಸು ಮಾಡುವತ್ತ ಗಮನ ಕೇಂದ್ರೀಕರಿಸಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಗದೀಶ್ ಚೌಡುವಳ್ಳಿ ಮಾತನಾಡಿ, ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಅದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಹಾರನಹಳ್ಳಿ ರಾಮಸ್ವಾಮಿ ಪದವಿಪೂರ್ವ ಕಾಲೇಜು ಆಡಳಿತ ಮಂಡಳಿ ಉಪಾಧ್ಯಕ್ಷ ಹೇಮಂತ ಕುಮಾರ್ ಅವರು, ಕಾಲೇಜಿನಲ್ಲಿ ದೊರೆಯುವ ಶೈಕ್ಷಣಿಕ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಕಾಲೇಜಿನ ಆಡಳಿತ ಮಂಡಳಿ ನಿರ್ದೇಶಕ ಡಾ. ಪಾರ್ಥ ಮಾತನಾಡಿ, ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದರ ಜೊತೆಗೆ ಅವರಲ್ಲಿ ಸಹಾಯ ಗುಣ ಬೆಳೆಸಬೇಕು. ಮಕ್ಕಳ ನಡೆನುಡಿಯ ಬಗ್ಗೆ ಗಮನ ಹರಿಸಬೇಕು ಎಂದರು.

ಪ್ರಾಂಶುಪಾಲ ಅರುಣ್ ಕುಮಾರ್ ಮತ್ತು ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಖಜಾಂಚಿ ರಾಜಶೇಖರ್ ಉಪಸ್ಥಿತರಿದ್ದರು.

ಕನ್ನಡ ಉಪನ್ಯಾಸಕಿ ಪವಿತ್ರ ಪ್ರಸನ್ನ ಕುಮಾರ್ ಕಾರ್ಯಕ್ರಮ ನಿರೂಪಿಸಿದರು. ವಾಣಿಜ್ಯ ವಿಭಾಗದ ಉಪನ್ಯಾಸಕಿ ಗಗನ ಸ್ವಾಗತಿಸಿದರು ಮತ್ತು ಉಪನ್ಯಾಸಕಿ ಚಂದನ ವಂದಿಸಿದರು.

## ಮಧ್ಯಮ ವರ್ಗದ ಜೀವನ ತೆರೆದಿಡುವ ಮದ್ರಾಸ್ ಮ್ಯಾಟ್ನಿ (ಅಮೆಜಾನ್ ಪ್ರೈಂ)

- ಪ್ರಶಾಂತ್ ಭಟ್

ಮನದ ಹಾದಿ




ಮಧ್ಯಮ ವರ್ಗದ ಜೀವನ ಅಂದರೆ ಏನು?. ಕಣ್ತುಂಬ ಕನಸು, ಒಳ್ಳೆಯ ಬದುಕಿನ ಕನಸು. ಅದು ನನಸಾಗಲು ಮೊದಲು ಹೊಟ್ಟೆ ತುಂಬಿಸಿಕೊಳ್ಳಬೇಕು ಅದು ಮುಖ್ಯ.

ಈ ಸಿನಿಮಾದ ಹಲವು ಭಾಗ ನಿಜಕ್ಕೂ ಚೆನ್ನಾಗಿದೆ. ಆದರೆ ಪ್ರೇಕ್ಷಕ ಬುದ್ಧಿವಂತ ಎಂಬುದನ್ನು ನಿರ್ದೇಶಕ ಮರೆತರೆ ಅವನಿಗೆ ಎಲ್ಲವನ್ನೂ ಬಿಡಿಸಿ ಹೇಳಬೇಕಾದ ಚಪಲ ಶುರುವಾಗುತ್ತದೆ. ಅಲ್ಲಿಗೆ ಸಿನಿಮಾ ಆಕಳಿಕೆ ತರಿಸುತ್ತದೆ.

ಹಾಗಾಗಿಯೇ ಆ ಬಿಡಿಸಿ ಹೇಳುವ ಪಾತ್ರವಾಗಿ ಬರುವ ಸತ್ಯರಾಜ್ ಸಿನಿಮಾ ಉದ್ದಕ್ಕೂ ಕಿರಿಕಿರಿ ಉಂಟು ಮಾಡುತ್ತಾರೆ. ಆಟೋ ಓಡಿಸುವ ಅಪ್ಪ, ಅಡುಗೆ ಮನೆಯಲ್ಲಿ ಅಮ್ಮ, ಮದ್ರಾಸ್‌ನ ಹಗಲು ಇರುಳು, ಬೀದಿಗಳು, ಬೇರೆ ಊರಿನಲ್ಲಿ ಇದ್ದು ಕೆಲಸಕ್ಕೆ ಹೋಗುವ ಅಕ್ಕ, ಪಿಯುಸಿ ನಂತರ ಮುಂದೇನು ಎಂದು ದಾರಿ ತಿಳಿಯದೆ ಕೂತ ತಮ್ಮ ಹೀಗೆ ನಾಲ್ವರು ಅವರ ಸುತ್ತಲಿನ ಜನರು ಇದೇ ಕತೆ.

ಅನಿರೀಕ್ಷಿತದ್ದೇನೂ ಘಟಿಸದ ಜೀವನ, ಬದುಕಿಗಾಗಿ ಹೋರಾಟ ಇದನ್ನೆಲ್ಲ ಬಹಳ ಚಂದಕ್ಕೆ ತಂದಿದ್ದಾರೆ. ಸಂಭಾಷಣೆಗಳು ಚೆನ್ನಾಗಿದೆ. ಕೊರತೆ ಎಂದರೆ ಹೇಳಬೇಕಾದ್ದನ್ನು ದೃಶ್ಯಗಳ ಮೂಲಕ ದಾಟಿಸಿದ ಬಳಿಕ ಕೂಡ ನಿರೂಪಕ ಅದನ್ನು ವಿವರಿಸುತ್ತಾನೆ. ಒಮ್ಮೆ ನೋಡಿ ಹಗುರಾಗಬಹುದಾದ ಸಿನಿಮಾ. ನಮ್ಮ-ನಿಮ್ಮ ಕುಟುಂಬದ ಕತೆ.

- ರೇಟಿಂಗ್ 8/10

## ಭೂ ಮಾಪಕರ ಮುಷ್ಕರಕ್ಕೆ ರೈತ ಸಂಘ ಬೆಂಬಲ



ಅರಕಲಗೂಡು: ಸೇವಾ ಭದ್ರತೆ, ಕನಿಷ್ಠ ವೇತನವೂ ಇಲ್ಲದೆ ದುಡಿಯುತ್ತಿರುವ ಭೂ ಮಾಪಕರ ವಿವಿಧ ಬೇಡಿಕೆಗಳನ್ನು ಈಡೇರಿಸದಿದ್ದರೆ ಸರ್ಕಾರದ ವಿರುದ್ಧ ಹೋರಾಟ ತೀವ್ರಗೊಳಿಸುವುದಾಗಿ ತಾಲ್ಲೂಕು ರೈತ ಸಂಘದ ಅಧ್ಯಕ್ಷ ಎಸ್.ವಿ. ಯೋಗಣ್ಣ ತಿಳಿಸಿದರು.

ಪಟ್ಟಣದಲ್ಲಿ ಭೂ ಮಾಪಕರ ಮುಷ್ಕರ ಬೆಂಬಲಿಸುವಂತೆ ಮುಷ್ಕರ ನಿರತರಿಂದ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಿ ಸೇವೆ ಕಾಯಂಗೊಳಿಸುವಂತೆ ಸರ್ಕಾರಿ ಭೂ ಮಾಪಕರ ಕಚೇರಿ ಆವರಣದಲ್ಲಿ ಕಳೆದ ಒಂದು ವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಂಡಿದ್ದರೂ ಸರ್ಕಾರ ಕಣ್ಮುಚ್ಚಿ ಕುಳಿತಿದೆ. ಮುಷ್ಕರ ನಿರತರು ಕೆಲಸ ಸ್ಥಗಿತಗೊಳಿಸಿರುವುದರಿಂದ ರೈತರ ಕೆಲಸಗಳಿಗೆ ತೊಂದರೆಯಾಗಿದೆ. ತಕರಾರು, ಕೋರ್ಟ್ ಆದೇಶ ಪ್ರಕರಣ, ಪೋಡಿಮುಕ್ತ, ಆಕಾರಬಂದ್, ಡಿಜಿಟೈಜೇಶನ್, ದರ್ಖಾಸ್ತು ಪೋಡಿ, ಮತ್ತಿತರ ಪ್ರಕರಣಗಳನ್ನು ನಿರ್ವಹಿಸುತ್ತಿರುವ ಭೂ ಮಾಪಕರ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸಬೇಕು. ಇಲ್ಲವಾದರೆ ರೈತ ಸಂಘ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ ದೊಡ್ಡ ಮಟ್ಟದಲ್ಲಿ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

## ಕಲಾಕೃತಿ ರಕ್ಷಣೆಗೆ ಸರ್ಕಾರ ಬದ್ಧ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಸಾವಿರ ವರ್ಷಗಳ ಇತಿಹಾಸದ ವಣಥ ಚಿತ್ರಕಲಾಕೃತಿಗಳು ಮಠದಲ್ಲಿದ್ದು ರಕ್ಷಿಸಬೇಕು ಎನ್ನುವುದು ಸರ್ಕಾರ ಇಚ್ಛೆ. ಸ್ವಾಮೀಜಿಯವರು ಅವುಗಳನ್ನು ರಕ್ಷಣೆ ಮಾಡಲು ರಾಜ್ಯ ಸರ್ಕಾರಕ್ಕೆ ಕೊಟ್ಟರೆ ಅವನ್ನ ಪ್ರೊಟೆಕ್ಟೆಡ್ ಪೈಂಟ್ ಎಂದು ಮಾಡಲು ನಾವು ಪ್ರಯತ್ನ ಮಾಡುತ್ತೇವೆ ಎಂದು ಸಚಿವ ಹೆಚ್. ಕೆ. ಪಾಟೀಲ್ ಹೇಳಿದರು.



ಶ್ರವಣಬೆಳಗೊಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬಾಹುಬಲಿ ದರ್ಶನ, ಮುನಿಗಳ ದರ್ಶನ, ತಾಯಿಯ ದರ್ಶನ ಮಾಡಿದ್ದೇನೆ. ಸಹಜವಾಗಿ ಶ್ರವಣಬೆಳಗೊಳದ ಐತಿಹಾಯ ಪ್ರತಿಮೆ, ಪುತ್ಥಳಿ, ವಿಗ್ರಹ, ಬಾಹುಬಲಿಯ ಅದ್ಭುತ ಹಾಗೂ ಪವಿತ್ರವಾದ ಶಿಲೆಯು ಕಾರಣ ಜಗತ್ತಿನಲ್ಲೇ ಪ್ರಸಿದ್ಧವಾಗಿದೆ ಎಂದರು.

ಶ್ರವಣಬೆಳಗೊಳದಿಂದ ಕರ್ನಾಟಕದ ಕೀರ್ತಿಯೂ ಹೆಚ್ಚಾಗಿದೆ. ವರ್ಣ ಚಿತ್ರಗಳನ್ನ ರಕ್ಷಣೆ ಮಾಡುವ ಕೆಲಸ ಈಗಾಗಲೇ ನೂರು ವರ್ಷಗಳಿಂದಲೇ ಪ್ರಾರಂಭ ಆಗಬಹುದಿತ್ತು. ಇವತ್ತಿನಿಂದ ಅದರ ರಕ್ಷಣೆ ಕೆಲಸದ ಬಗ್ಗೆ ನಾವು ಕ್ರಮ ವಹಿಸುತ್ತೇವೆ ಎಂದರು.

ಹೃದಯಾಘಾತ ಸರಣಿ ಸಾವಿನ ಪ್ರಕರಣ ಜನರನ್ನು ಗಾಬರಿಗೊಳಿಸಿದೆ. ಆರೋಗ್ಯ ಸಚಿವರು ಹಲವಾರು ಸ್ಪಷ್ಟವಾದ ವಿಚಾರಗಳನ್ನು ಹೇಳಿದ್ದಾರೆ. ಯಾರೂ ಸಹ ಭಯ ಪಡಬೇಕಾದ ಅಗತ್ಯವಿಲ್ಲ. ಆದರೆ ಎಲ್ಲರನ್ನೂ ಆತಂಕಕ್ಕೆ ಒಳಪಡಿಸಿದೆ ಸರ್ಕಾರ ಅಗತ್ಯವಿರುವ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಭರವಸೆ ನಿಡಿದರು.

ಎಲ್ಲಿ ಗಟ್ಟಿಯಾದ ಹೈಕಮಾಂಡ್ ಇರೋದಿಲ್ಲವೋ ಅಲ್ಲಿ ಏನಾದರೂ ಆಗಿಬಿಡುತ್ತದೆ. ಆದರೆ ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಗಟ್ಟಿಯಾದ ಹೈಕಮಾಂಡ್ ಇದೆ. ಪ್ರಬಲವಾದ ನಾಯಕತ್ವ ಇದೆ. ತತ್ವ ಹಾಗೂ ಸಿದ್ಧಾಂತದ ಮೇಲೆ ಸರ್ಕಾರ ರಚನೆ ಆಗಿದೆ. ಉತ್ತಮ ಪಕ್ಷ ಕಟ್ಟಿದ್ದೇವೆ. ಅಧಿಕಾರಕ್ಕೆ ಬರಬೇಕು ಎಂದು ಪಕ್ಷ ಬಂದಿದ್ದಲ್ಲ. ಜನರ ಸೇವೆಯೇ ನಮ್ಮ ಗುರಿಯಾಗಿದೆ. ಆ ಕಾರಣದಿಂದ ಬದಲಾವಣೆ ಕ್ರಾಂತಿ ಯಾರು ಏನೇ ಮಾತನಾಡಿದರೂ ನಮ್ಮ ಸರ್ಕಾರ ಅತ್ಯಂತ ಸದೃಢವಾಗಿರುತ್ತದೆ. ನಮ್ಮ ಪಕ್ಷ ಅತ್ಯಂತ ಸ್ಪಷ್ಟವಾದ ಜನಸೇವೆಯಲ್ಲಿ ತೊಡಗಿಕೊಂಡಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

### ಕೇರಂ ಪಂದ್ಯಾವಳಿ

ಜು. 11ಕ್ಕೆ ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಹಾಸನ: ಐಸಿಎಸ್‌ಇ ಶಾಲೆಗಳಿಗೆ ನಡೆಯುವ ಸಿಐಎಸ್‌ಸಿಇ ವಲಯ 8ರ ಕೇರಂ ಪಂದ್ಯಾವಳಿಯನ್ನು ನಗರದ ಸ್ಕಾಲರ್ಸ್ ಇಂಟರ್‌ನ್ಯಾಷನಲ್ ಸ್ಕೂಲ್ ವತಿಯಿಂದ ಜು. 11ರ ಶುಕ್ರವಾರ ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಚಿಕ್ಕಮಗಳೂರಿನ ಅಂಬರ್ ವ್ಯಾಲಿ ರೆಸಿಡೆನ್ಶಿಯಲ್ ಶಾಲೆ ಪ್ರಾಂಶುಪಾಲ ಡಾ. ಜಾನ್ ಅಬ್ರಹಾಂ, ಇಂಡಿಯನ್ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲ ಡಾ. ರುದ್ರಯ್ಯ ಹಿರೇಮಠ ಮತ್ತು ಸ್ಕಾಲರ್ಸ್ ಇಂಟರ್‌ನ್ಯಾಷನಲ್ ಸ್ಕೂಲ್ ಪ್ರಾಂಶುಪಾಲ ಡಾ. ಎಚ್.ಎನ್. ಚಂದ್ರಶೇಖರ್ ಪಾಲ್ಗೊಳ್ಳಲಿದ್ದಾರೆ. ಕ್ರೀಡಾಕೂಟದಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ತುಮಕೂರು ಜಿಲ್ಲೆಗಳಿಂದ ಸುಮಾರು 85 ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಜುಲೈ-10

1947: ಭಾರತದಲ್ಲಿ ಮೊದಲ ಅಂತರಿಕ ಸರ್ಕಾರದ ಅಧಿವೇಶನದಲ್ಲಿ ಅಲಹಾಬಾದ್ ಹೈಕೋರ್ಟ್ ಜಡ್ಜ್ ಎಚ್.ಜೇ. ಕನಿಯಾ ಅವರನ್ನು ಭಾರತದ ಮೊದಲ ಮುಖ್ಯ ನ್ಯಾಯಾಧೀಶರಾಗಿ ನೇಮಕ ಮಾಡುವ ನಿರ್ಧಾರ ಕೈಗೊಳ್ಳಲಾಯಿತು.

1985: ಭಾರತದ ಪ್ರಧಾನಮಂತ್ರಿ ರಾಜೀವ್ ಗಾಂಧಿ ಅವರು ಶ್ರೀಲಂಕಾದೊಂದಿಗೆ ಭಾರತೀಯ ಶಾಂತಿ ಪಡೆ ಒಪ್ಪಂದಕ್ಕೆ ಸಹಿ ಹಾಕಿದರು.

1925: ಮೀನ್ ಕ್ಯಾಂಪ್ ಪುಸ್ತಕವನ್ನು ಮೊದಲ ಬಾರಿಗೆ ಜರ್ಮನಿಯಲ್ಲಿ ಹಿಟ್ಲರ್ ಬರೆದಂತೆ ಪ್ರಕಟಿಸಲಾಯಿತು.

1962: ನಾಸಾ ಸಂಸ್ಥೆಯ ಟೆಲ್ಸ್ಟಾರ್ 1 ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. ಇದು ವಿಶ್ವದ ಮೊದಲ ಉಪಗ್ರಹ ಟಿವಿ ಪ್ರಸಾರಕ್ಕೆ ನೆರವಾದ ಉಪಗ್ರಹ.

1991: ಬೋರಿಸ್ ಯೆಲ್ಟ್ಸಿನ್ ರಷ್ಯಾದ ಮೊದಲ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದರು.

2018: ಥಾಯ್ಲೆಂಡ್‌ನ ಗುಹೆಯಲ್ಲಿ ಸಿಕ್ಕಿಹಾಕಿಕೊಂಡಿದ್ದ 12 ಬಾಲಕರು ಮತ್ತು ಅವರ ಕೋಚ್ ಅವರನ್ನು 18 ದಿನಗಳ ರೋಚಕ ಕಾರ್ಯಾಚರಣೆ ನಂತರ ಯಶಸ್ವಿಯಾಗಿ ರಕ್ಷಿಸಲಾಯಿತು.

#### ಜನನ

1997: ಕಂಗಣಾ ರಣಾವತ್, ಖ್ಯಾತ ಭಾರತೀಯ ನಟಿ

1856: ನಿಕೊಲಾ ಟೆಸ್ಲಾ, ಜಗತ್ಪ್ರಸಿದ್ಧ ವಿಜ್ಞಾನಿ ಮತ್ತು ಆವಿಷ್ಕಾರಕ

1871: ಮಾರ್ಸೆಲ್ ಪ್ರೂಸ್ಟ್, ಪ್ರಸಿದ್ಧ ಫ್ರೆಂಚ್ ಲೇಖಕ

#### ಮರಣ

1559: ಹೆನ್ರಿ 2, ಫ್ರಾನ್ಸ್‌ನ ರಾಜ

2006: ಶೆರ್‌ಮನ್ ಬ್ಲಾಕ್, ಅಮೆರಿಕದ ಪ್ರಸಿದ್ಧ ಚಲನಚಿತ್ರ ನಿರ್ದೇಶಕ

# ಅರ್ಥಪೂರ್ಣ ಜನಸ್ಪಂದನ ಕಾರ್ಯಕ್ರಮಕ್ಕೆ ಸೂಚನೆ

## ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ | ಅರ್ಜಿ ಸ್ವೀಕಾರಕ್ಕೆ ಸಿದ್ಧತೆಗೆ ಡಿಸಿ ಸಲಹೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಾರ್ವಜನಿಕ ಸಮಸ್ಯೆಗಳನ್ನು ಆಲಿಸಲು ಪ್ರತಿ ತಿಂಗಳ ಮೊದಲ ಶನಿವಾರ ಜಿಲ್ಲೆಯ ಎಲ್ಲಾ ತಹಶೀಲ್ದಾರ್ ಕಚೇರಿಯಲ್ಲಿ ತಾಲ್ಲೂಕು ಮಟ್ಟದ ಹಾಗೂ ಮೂರನೇ ಶನಿವಾರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾ ಮಟ್ಟದ ಜನಸ್ಪಂದನ ಕಾರ್ಯಕ್ರಮ ನಡೆಸಲು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸೂಚಿಸಿದರು.

ಎಲ್ಲ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದದಲ್ಲಿ ಮಾತನಾಡಿ, ಸ್ವೀಕೃತವಾದ ಅರ್ಜಿಗಳನ್ನು ನಿಗದಿತ ದಿನಗಳೊಳಗೆ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು. ಅನವಶ್ಯಕವಾಗಿ ವಿಳಂಬ ಮಾಡಬಾರದು ಎಂದು ಸೂಚಿಸಿದರು.

ಗ್ರಾಮ ಆಡಳಿತಾಧಿಕಾರಿಗಳು ಕಚೇರಿ ವ್ಯವಸ್ಥೆ ಮಾಡಿಕೊಳ್ಳಬೇಕು. ಪೌತಿ ಖಾತೆ ಆಂದೋಲನ ನಡೆಸುವುದರ ಜೊತೆಗೆ ಪ್ರತಿ ವಾರ ವರದಿ ನೀಡಬೇಕು. ಬಾಕಿಯಿರುವ ನ್ಯಾಯಾಲಯ ಪ್ರಕರಣಗಳ ಕಡತ ವಿಲೇವಾರಿಗೆ ಗಮನಹರಿಸಿ ಎಂದು ತಿಳಿಸಿದರು.

ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಲು ಸೂಚಿಸಿದರಲ್ಲದೆ, ಸಾರ್ವಜನಿಕರು ತೊಂದರೆಯಾಗದಂತೆ ಪಿಂಚಣಿ ಆಂದೋಲನ ನಡೆಸಬೇಕು. ಸರ್ಕಾರದ ಆಸ್ತಿಗೆ ವಾರಸುದಾರರು ಅಧಿಕಾರಿಗಳು ಈ ನಿಟ್ಟಿನಲ್ಲಿ ಸರ್ಕಾರಿ ಆಸ್ತಿಗಳನ್ನು ಸಂರಕ್ಷಣೆ ಮಾಡುವಂತೆ ಸೂಚಿಸಿದ ಅವರು ಸರ್ಕಾರಿ ಕಟ್ಟಡಗಳನ್ನು ಉತ್ತಮವಾಗಿ ನಿರ್ವಹಣೆ ಮಾಡಬೇಕು. ಸರ್ಕಾರಿ ಆಸ್ತಿಗಳ ಒತ್ತುವರಿ ತೆರವಿಗೆ ಕ್ರಮಕ್ಕೈಗೊಳ್ಳಲು ತಿಳಿಸಿದರು.

ಜಿಲ್ಲೆಯ ಎಲ್ಲಾ ರೈತಾಪಿ ವರ್ಗದವರಿಗೆ, ಸಾರ್ವಜನಿಕರಿಗೆ ಹಾಗೂ ಗ್ರಾಮೀಣ ಜನತೆಗೆ ಸಾಮಾಜಿಕ, ಶೈಕ್ಷಣಿಕ, ವಾಣಿಜ್ಯ ಹಾಗೂ ಕೃಷಿ ಚಟುವಟಿಕೆಗಳಿಗೆ ವಿವಿಧ ಇಲಾಖೆಗಳಲ್ಲಿ ದೊರೆಯಬೇಕಾದ ಸೌಲಭ್ಯಗಳು ನಿಗದಿದತ ಅವಧಿಯೊಳಗೆ ದೊರೆಯದೆ ಇದ್ದಾಗ ತಮ್ಮ ಅಹವಾಲು ದಾಖಲಿಸಲು ಸರ್ಕಾರವು ಏಕೀಕೃತ ಸಾರ್ವಜನಿಕ ದೂರು ನಿವಾರಣಾ ತಂತ್ರಾಂಶ (Integrated Public Grievance Redressal System) ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿರುತ್ತದೆ.

ಏಕೀಕೃತ ಸಾರ್ವಜನಿಕ ಕೊಂದುಕೊರತೆ ವ್ಯವಸ್ಥೆಯು ಜನಸ್ಪಂದನಾ ಪೋರ್ಟಲ್ (https://espandana.karnataka.gov.in ಅಥವಾ https://ipgrs.karnataka.gov.in) ಮತ್ತು ಮೊಬೈಲ್ ಅಪ್ಲಿಕೇಷನ್ http://play.google.com/store/apps/details?id=com.csg.ipgrs) ನಲ್ಲಿಯೂ ಲಭ್ಯವಿರುತ್ತದೆ. ಇದರಲ್ಲಿ ಸಾರ್ವಜನಿಕರು ನೇರವಾಗಿ ತಮ್ಮ ಅಹವಾಲುಗಳನ್ನು ತಂತ್ರಾಂಶದ ಮೂಲಕ ದಾಖಲಿಸಬಹುದಾಗರುತ್ತದೆ.

ಏಕೀಕೃತ ಸಾರ್ವಜನಿಕ ಕೊಂದುಕೊರತೆ ವ್ಯವಸ್ಥೆಗೆ ಮೀಸಲಾದ 1902 ಸಹಾಯವಾಣಿಯೂ ಸಹ ನಾಗರಿಕರಿಗೆ ಲಭ್ಯವಿರುತ್ತದೆ. ಅಂತರ್ಜಾಲ ವ್ಯವಸ್ಥೆಯಿಲ್ಲದ




ಕುಗ್ರಾಮಗಳಿಂದಲೂ ಸಹ ಸಾರ್ವಜನಿಕರು 1902 ಸಹಾಯವಾಣಿಗೆ ಕರೆ ಮಾಡಿ ದೂರು/ ಕುಂದುಕೊರತೆಗಳನ್ನು ದಾಖಲಿಸಬಹುದಾಗಿರುತ್ತದೆ.

ಇವುಗಳನ್ನು ಹೊರತುಪಡಿಸಿ ಸಾರ್ವಜನಿಕರು ತಮ್ಮ ಅಹವಾಲನ್ನು ಸಲ್ಲಿಸಲು ಒಂದು ವೇದಿಕೆಯನ್ನು ಕಲ್ಪಿಸುವ ಸಲುವಾಗಿ ಜನಸ್ಪಂದನ ಕಾರ್ಯಕ್ರಮವನ್ನು ಆಯೋಜಿಸಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಜನರು ಅಹವಾಲನ್ನು ಆಲಿಸಿ ಸಮಸ್ಯೆಗಳನ್ನು ನಿವಾರಿಸುವ ಉದ್ದೇಶವನ್ನು ಹೊಂದಿ ಜನಸ್ಪಂದನ ಕಾರ್ಯಕ್ರಮವನ್ನು ಜಿಲ್ಲೆ ಮತ್ತು ತಾಲೂಕು ಮಟ್ಟದಲ್ಲಿ ಆಯೋಜಿಸಲು ಸರ್ಕಾರ ನಿರ್ದೇಶನ ನೀಡಿರುತ್ತದೆ ಎಂದರು.

ಜಿಲ್ಲಾ ಮಟ್ಟದಲ್ಲಿ ನಡೆಯುವ ಜನಸ್ಪಂದನ ಕಾರ್ಯಕ್ರಮದಲ್ಲಿ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರತಕ್ಕದ್ದು, ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ಜನಸ್ಪಂದನ ಕಾರ್ಯಕ್ರಮದಲ್ಲಿ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು. ತಾಲ್ಲೂಕು ಮಟ್ಟದಲ್ಲಿ ನಡೆಯುವ ಜನಸ್ಪಂದನ ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿಗಳು ಒಂದೊಂದು ತಿಂಗಳು ಒಂದೊಂದು ತಾಲ್ಲೂಕಿನಲ್ಲಿ ಇರಬೇಕು ಎಂದರು.

ಪ್ರತಿ ತಿಂಗಳ ಮೂರನೇ ಶನಿವಾರ ಜಿಲ್ಲಾಮಟ್ಟದ ಜನಸ್ಪಂದನ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಹಕಾರದೊಂದಿಗೆ ಜಿಲ್ಲಾ ಜನಸ್ಪಂದನ ಕಾರ್ಯಕ್ರಮವನ್ನು ಆಯೋಜಿಸಲಾವುದು ಎಂದರು.

ಜಿಲ್ಲಾ ಜನಸ್ಪಂದನದಲ್ಲಿ ಜಿಲ್ಲೆಯ ಎಲ್ಲಾ ಇಲಾಖೆಗಳ ಅಧಿಕಾರಿಗಳು ತಮ್ಮ ಸಿಬ್ಬಂದಿ ಜೊತೆಗೂಡಿ ಕಡ್ಡಾಯವಾಗಿ ಭಾಗವಹಿಸುವುದು. ಜನಸ್ಪಂದನದಲ್ಲಿ ಸ್ವೀಕರಿಸಲಾಗುವ ಸಾರ್ವಜನಿಕರ ಕುಂದುಕೊರತೆ /ಮನವಿಗಳನ್ನು ಐ.ಪಿ.ಜಿ.ಆರ್ ಎಸ್ ತಂತ್ರಾಂಶದಲ್ಲಿನ Distict Janaspanadan (DJS) ಮಾಡ್ಯೂಲ್ ಅನ್ನು ಬಳಸಿ ದಾಖಲಿಸುವುದು.

### ಜನಸ್ಪಂದನ ಕಾರ್ಯಕ್ರಮ ವಿವರ

2025ರ ಜು. 19, ಆ. 16, ಸೆ. 20, ಅ. 18, ನ. 15, ಡಿ. 20, 2026ರ ಜ. 17, ಫೆ. 21, ಮಾ. 21 ರಂದು ಜಿಲ್ಲಾ ಮಟ್ಟದ ಜನಸ್ಪಂದನ ಕಾರ್ಯಕ್ರಮವನ್ನು ನಡೆಸಲು ನಿರ್ಧರಿಸಲಾಗಿದೆ.

2025ರ ಆ. 2, ಸೆ. 6, ಅ. 4, ನ. 3, ಡಿ. 6, 2026ರ ಜ. 3, ಫೆ. 7, ಮಾ. 7 ತಾಲ್ಲೂಕು ಮಟ್ಟದ ಜನಸ್ಪಂದನ ಕಾರ್ಯಕ್ರಮಕ್ಕೆ ದಿನಾಂಕ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಜಿಲ್ಲಾ ಜನಸ್ಪಂದನವನ್ನು ಆಯೋಜಿಸಲು ಭೂಮಿ, ಇ-ಆಫೀಸ್, ಆಧಾರ್, ಸೇವಾ ಸಿಂಧು ಯೋಜನೆಗಳ ಸಮಾಲೋಚಕರು ಹಾಗೂ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ಜಿಲ್ಲಾ ಯೋಜನಾ ನಿರ್ವಹಣಾ ಘಟಕದ ತಾಂತ್ರಿಕ ಸಮಾಲೋಚಕರನ್ನು ಮಾಸ್ಟರ್ ತರಬೇತಿದಾರರೆಂದು ನೇಮಿಸಿ, ಎಲ್ಲಾ ಇಲಾಖೆಗಳ ದತ್ತಾಂಶ ನಮೂದಕರಿಗೆ ತರಬೇತಿ ನೀಡಿ ಆಯಾ ಇಲಾಖೆಗೆ ಸ್ವೀಕೃತವಾಗುವ ಮನವಿ ಹಾಗೂ ಕುಂದುಕೊರತೆಗಳನ್ನು ಐ.ಪಿ.ಜಿ.ಆರ್.ಎಸ್ ತಂತ್ರಾಂಶದಲ್ಲಿ ದಾಖಲಿಸಲು ಕ್ರಮ ಕೈಗೊಳ್ಳುವುದು.

ಪ್ರತಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಜಿಲ್ಲಾ ಜನಸ್ಪಂದನಕ್ಕಾಗಿ ನುರಿತ/ಅನುಭವಿ ಅಧಿಕಾರಿ, ಸಿಬ್ಬಂಧಿ ಮತ್ತು ದತ್ತನಮೂದಕರುಗಳ (ಡಾಟಾ ಎಂಟ್ರಿ ಆಪರೇಟರ್) ಟೈಪಿಸ್ಟ್ ಗಳ ತಂಡವನ್ನು ರಚಿಸಿಕೊಂಡು ನಾಗರೀಕರ ಕುಂದುಕೊರತೆ/ಮನವಿಗಳನ್ನು ಸ್ವೀಕರಿಸಿ, ಐ.ಪಿ.ಜಿ.ಆರ್.ಎಸ್ ತಂತ್ರಾಂಶದಲ್ಲಿ ಯಾವುದೇ ತಪ್ಪಿಲ್ಲದಂತೆ ಅದೇ ದಿವಸವೇ ದಾಖಲಿಸುವಂತೆ ತಿಳಿಸಿದರು.

ಜನಸ್ಪಂದನಕ್ಕೆ ಬಂದಂತಹ ನಾಗರೀಕರ ನೋಂದಣಿಗಾಗಿ ಜಿಲ್ಲಾಡಳಿತದಿಂದ ವ್ಯವಸ್ಥೆ ಮಾಡುವುದು ಹಾಗೂ ಅರ್ಜಿದಾರರ ಅಹವಾಲು/ಮನವಿಯನ್ನು ಸ್ವೀಕರಿಸಿ ಸೂಕ್ತ ಸ್ವೀಕೃತಿಯನ್ನು ನೀಡುವುದು ಪ್ರತಿ ಇಲಾಖೆಯೂ ಸಹ ತಮ್ಮಲ್ಲಿಗೆ ಬರುವ ವಯೋವೃದ್ದರು, ಹಿರಿಯ ನಾಗರಿಕರು, ವಿಕಲಚೇತನರು, ಗರ್ಭಿಣಿಯರು, ಸಣ್ಣ ಮಕ್ಕಳೊಂದಿಗೆ ಬಂದಂತಹ ನಾಗರಿಕರ ಮೊದಲ ಆದ್ಯತೆ ನೀಡುವಂತೆ ತಿಳಿಸಿದರು

ಜಿಲ್ಲಾ ಜನಸ್ಪಂದನದಲ್ಲಿ ದೂರುಗಳನ್ನು ಹಾಗೂ ಮನವಿಗಳನ್ನು ಸ್ವೀಕರಿಸಲು ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆಯ ತಂತ್ರಾಂಶದಲ್ಲಿ ಜಿಲ್ಲಾಧಿಕಾರಿಯವರಿಗೆ ನೀಡಲಾದ ಲಾಗಿನ್‌ಗಳನ್ನು ಉಪಯೋಗಿಸಿ ದೂರುಗಳನ್ನು ದಾಖಲಿಸಲು ಕ್ರಮವಹಿಸಬೇಕು ಎಂದು ಹೇಳಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248